	ಕರ್ನಾಟಕ ನಿಯೋಗ ಭೇಟಿ ನೀಡಲು ಮತ್ತು ಮೇಳದಲ್ಲಿ ಸಾವಯವ ಕೃಷಿ ಕರ್ನಾಟಕ ಪೆವಿಲಿಯನ್ ಸ್ಥಾಪಿಸಲು ಸಾವಯವ ಕೃಷಿಯಲ್ಲಿ ಪುಸ್ತಕ, ಕಿರುಹೊತ್ತಿಗೆ ಪೋಸ್ಟ್ರ್, ಸಿ.ಡಿ. ಕರಪತ್ರ ಇತ್ಯಾದಿ ಪ್ರಕಟಣೆ/ ಖರೀದಿಗೆ, ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳ ಪ್ರತ್ಯೇಕ ವೆಬ್ ಸೈಟ್ ಸ್ಥಾಪನೆ ಮತ್ತು ನಿರ್ವಹಣೆ, ಸಾವಯವ ಕೃಷಿಯ ತಾಂತ್ರಿಕತೆಗಳು ಮತ್ತು ಯಶೋಗಾಥೆಗಳ ಬಗ್ಗೆ ಕಿರುಚಿತ್ರ /ಡಾಕ್ಯುಮೆಂಟರಿ ಚಿತ್ರ ತಯಾರಿಕೆ, ಸಾವಯವ ಕೃಷಿ ಉತ್ಪನ್ನಗಳ ಬಗ್ಗೆ ಟಿ.ವಿ. ಮತ್ತು F.M. ಗಳಲ್ಲಿ ಜಾಹೀರಾತು ಮತ್ತು ದೂರದರ್ಶನದಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳು.
3.	ಸಾವಯವ ಕೃಷಿಯಲ್ಲಿ ಸಂಶೋಧನೆ, ಹೊಸ ಯೋಜನೆಗಳ ಅನುಷ್ಠಾನ (Innovative projects) ಗ್ರಾಮೀಣ ಪ್ರವಾಸ–ಪರಿಸರ ಪ್ರವಾಸ ಯೋಜನೆ.
4	ಸಾವಯವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಅಭಿವೃದ್ಧಿ: Market linkage contract farming, ಸಾವಯವ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಆಧಾರಿತ ಯೋಜನೆ ಗಳಿಗೆ (Project Mode ಆಧಾರಿತ ಸಹಾಯಧನ)
5	ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೌಲ್ಯಮಾಪನ (ಹೊರಗಿನ ಸಂಸ್ಥೆಗಳಿಂದ)
6	ಸಾವಯವ ಕೃಷಿ ಘಟಕದ ಸಾದಿಲ್ವಾರು ವೆಚ್ಚಕ್ಕೆ ಕಛೇರಿ ಅಭಿವೃದ್ಧಿ ಮತ್ತು ನಿರ್ವಹಣೆ ಹೊರಗುತ್ತಿಗೆ ಆಧಾರದ ವಾಹನ/ಡೇಟಾ ಎಂಟ್ರಿ ಅಪರೇಟರ್ ಸೇರಿದಂತೆ.
7	ಸುವರ್ಣ ಭೂಮಿ ಸಾವಯವ ಕೃಷಿ ಕಾರ್ಯಕ್ರಮ.

ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ವಿವರಗಳು

270 (607) :– ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ಮಾನ್ಯ ಇಂಧನ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಎಷ್ಟು ಸಕ್ಕರೆ ಕಾರ್ಖಾನೆಗಳು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆ ಮತ್ತು ಅದರ ಪ್ರಮಾಣವೆಷ್ಟು ;

(ಆ) ರಾಜ್ಯದಲ್ಲಿ ತಯಾರಾದ ವಿದ್ಯುತ್‌ನ್ನು ಹೊರ ರಾಜ್ಯಗಳಿಗೆ ಮಾರುವ ಅನುಮತಿ ನೀಡುವಾಗ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಯಾವ ರೀತಿಯಲ್ಲಿ ಪೂರೈಸಲಾಗುತ್ತಿದೆ; ರಾಜ್ಯವು ವಿದ್ಯುತ್ ಸಂಕಷ್ಟದಲ್ಲಿರುವಾಗ ಹೊರ ರಾಜ್ಯಗಳಿಗೆ ಮಾರುವ ಕ್ರಮವನ್ನು ನಿರ್ಬಂಧಿಸುವ ಕುರಿತು ಸರ್ಕಾರದ ಕ್ರಮಗಳೇನು ;

(ಇ) ರಾಜ್ಯದ ಬೇಡಿಕೆಯನ್ನು ಪೂರೈಸಿ ಉಳಿಕೆಯಾಗುವ ವಿದ್ಯುತ್ತನ್ನು ಮಾತ್ರ ಮಾರಾಟ ಮಾಡಲು ಅನುಮತಿ ಕುರಿತಾದ ನಿಯಮಗಳಿಗೆ ತಿದ್ದುಪಡಿ ಮಾಡಲಾಗುವುದೇ?

ಶ್ರೀ ಶೋಭಾ ಕರಂದ್ಲಾಜೆ (ಇಂಧನ ಸಚಿವರು):–

(ಅ) ರಾಜ್ಯದಲ್ಲಿ ಪ್ರಸ್ತುತ 38 ಸಕ್ಕರೆ ಕಾರ್ಖಾನೆಗಳು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದು, ಇವುಗಳ ಪೈಕಿ 14 ಸಕ್ಕರೆ ಕಾರ್ಖಾನೆಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದವಾಗಿದ್ದು, ಉಳಿದ ಸಕ್ಕರೆ ಕಾರ್ಖಾನೆಗಳು ವಿದ್ಯುತ್ತನ್ನು ಹೊರರಾಜ್ಯ ಅಥವಾ ಇತರರಿಗೆ ಹಂಚಿಕೆ ಮಾಡುತ್ತಿವೆ. ಅವುಗಳಿಂದ 574 ಮೆ.ವಾ.ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ವಿದ್ಯುತ್ ಖರೀದಿ ಒಪ್ಪಂದವಾಗಿರುವ ಸಕ್ಕರೆ ಕಾರ್ಖಾನೆಗಳಿಂದ ರಾಜ್ಯಕ್ಕೆ 155.58 ಮೆ.ವಾ. ನಷ್ಟು ವಿದ್ಯುತ್ ಲಭ್ಯವಾಗುತ್ತಿದೆ.

(ಆ) ವಿದ್ಯುತ್ ಕಾಯ್ದೆ 2003 (Electricity Act, 2003) ರ ಅಧಿನಿಯಮ 11ರ ಪ್ರಕಾರ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಅತ್ಯಂತ ತೀವ್ರವಾಗಿದ್ದಾಗ ಹೊರ ರಾಜ್ಯಗಳಿಗೆ ಹೋಗುವ ವಿದ್ಯುತ್ತನ್ನು ನಿರ್ಬಂಧಿಸುವ ಅಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿರುತ್ತದೆ.

ಶಿರಾಡಿಘಾಟ್ ಹೆದ್ದಾರಿಯ ಸುವ್ಯವಸ್ಥೆಗಾಗಿ ಸರ್ಕಾರದ ಕ್ರಮಗಳು

271 (608) :– ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ಮಾನ್ಯ ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಶಿರಾಡಿಘಾಟ್ ಹೆದ್ದಾರಿಯ ದುರಸ್ಥಿಯು ದೀರ್ಘ ಕಾಲದಿಂದಲೂ ನೆನೆಗುದಿಗೆ ಬೀಳುತ್ತಿರಲು ಕಾರಣಗಳೇನು; ಸಂಚಾರ ದಟ್ಟಣೆ ಮತ್ತು ವಿಪರೀತ ಮಳೆಯ ಕಾರಣದಿಂದಾಗಿ ಆಗಾಗ ಡಾಂಬರೀಕರಣವು ನಿಷ್ಪ್ರಯೋಜನಕಾರಿಯಾಗಿದ್ದು, ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಕೇಂದ್ರದ ನೆರವಿನೊಂದಿಗೆ ರಾಜ್ಯ ಸರ್ಕಾರ ಮಾಡಿದ ಪ್ರಯತ್ನಗಳು ನೆರವೇರದಿರಲು ಕಾರಣಗಳೇನು;

(ಆ) ಶಿರಾಡಿಘಾಟ್ ಹೆದ್ದಾರಿಯನ್ನು ಸರ್ವ ಋತು ಹೆದ್ದಾರಿಯನ್ನಾಗಿ ಮಾಡಲು ಸರ್ಕಾರದ ಮುಂದಿರುವ ಕ್ರಿಯಾ ಯೋಜನೆಗಳು ಯಾವುವು ;